ಕಣ್ಣೀರಿಳಿಸುತ್ತ ನಿಂತುಕೊಂಡಿತು. ಕಾಣಿಕೆಯನ್ನು ಕಂಡು ನರಿಗೆ ಸಂತೋಷವಾಯಿತು. 'ಯಾಕೆ ಅಳುತ್ತಿರುವೆ? ನಿನಗೇನು ಕಷ್ಟ ಬಂದಿದೆ?' ಎಂದು ವಿಚಾರಿಸಿತು.

ಹಂದಿ ತನಗೂ ಹುಲಿಗೂ ಕಲಹ ಉಂಟಾದ ಬಗೆಯನ್ನು ಹೇಳಿತು. ಬೆಳಗಾದ ಕೂಡಲೇ ತಮಗೆ ಯುದ್ಧ ನಡೆಯಲಿರುವ ವಿಷಯವನ್ನು ವಿವರಿಸಿತು. 'ತಾತಾ. ನನಗಿನ್ನು ಬದುಕುವ ದಾರಿ ಕಿಂಚಿತ್ತೂ ಇಲ್ಲ. ಬಲವಂತನಾದ ಹುಲಿಯೊಂದಿಗೆ ಹೋರಾಡಿ ನಾನು ಬದುಕಿ ಬರಲು ಹೇಗೆ ಸಾಧ್ಯ? ಅರೆಗಳಿಗೆಯಲ್ಲಿ ಸತ್ತುಹೋಗುತ್ತೇನೆ ಅಷ್ಟೆ. ಆದರೂ ನನಗೆ ಬದುಕಲು ಒಂದು ಸಹಾಯವಾಗುವುದಾದರೆ ನಿನ್ನಿಂದ ಮಾತ್ರ. ಎಂತೆಂಥ ಕಷ್ಟದ ಪ್ರಸಂಗಗಳು ಬಂದಾಗಲೂ ನೀನು ನೀಡಿದ ಸಹಾಯದಿಂದ ಕಾಡಿನ ಪ್ರಜೆಗಳು ಸಲೀಸಾಗಿ ಪಾರಾಗಿ ಬಂದಿದ್ದಾರೆಂಬುದು ನನಗೆ ಗೊತ್ತು. ನಾನು ಶಕ್ತಿವಂತನಲ್ಲದಿದ್ದರೂ ಹುಲಿಯಿಂದ ಪಾರಾಗುವ ಬಗೆಯನ್ನು ಹೇಳಿ ಕೊಟ್ಟು ಜೀವ ಉಳಿಸಬೇಕು' ಎಂದು ಬೇಡಿಕೊಂಡಿತು.

ನರಿ ಹಂದಿಯನ್ನು ಮೂದಲಿಸಿತು. 'ನೀನು ಅವಿವೇಕಿ. ಹುಲಿಯಂತಹ ಬಲವಂತನೊಂದಿಗೆ ಕದನಕ್ಕೆ ಮುಂದಾಗಿರುವ ನಿನಗೆ ಮೂರ್ಖನೆನ್ನದೆ ವಿಧಿಯಿಲ್ಲ. ಆದರೂ ಬದುಕಲು ಒಂದು ದಾರಿ ತೋರಿಸುತ್ತೇನೆ. ನೀನು ಬೆಳಗಿನ ವರೆಗೂ ಕೊಳಕಾಗಿ ದುರ್ಗಂಧ ಬರುತ್ತಿರುವ ಕೆಸರಿನಲ್ಲಿ ಹೊರಳಿ ಹೊರಳಿ ಮೈಯಲ್ಲಿ ಒಂದು ಚೂರೂ ಜಾಗವುಳಿಯದಂತೆ ಅದನ್ನು ಮೆತ್ತಿಕೊಂಡು ಯುದ್ಧಕ್ಕೆ ಹೋಗಬೇಕು' ಎಂದು ಉಪಾಯ ಹೇಳಿತು. ಅದನ್ನು ಕೇಳಿ ಹಂದಿಗೆ ಹೊಟ್ಟೆ ತೊಳಸಿ ವಾಕರಿಕೆ ಬಂತು. 'ಅಷ್ಟೊಂದು ಹೊಲಸಾದ ಕೆಸರನ್ನು ಮೈಗೆ ಮೆತ್ತಿಕೊಳ್ಳುವುದೆ? ನನ್ನನ್ನು ಕಂಡವರು ಕೆಟ್ಟ ವಾಸನೆ ಬರುತ್ತಿದೆ ಎಂದು ದೂರ ಓಡಿಸುವುದಿಲ್ಲವೆ?'ಎಂದು ಮುಖ ಸಣ್ಣದು ಮಾಡಿತು. ನರಿ ಜೋರಾಗಿ ನಕ್ಕಿತು. 'ಮಗುವೇ, ಇದು ಸೌಂದರ್ಯದ ಪ್ರಶ್ನೆಯಲ್ಲ. ನಿನಗೆ ಬದುಕು ಮುಖ್ಯ. ಹುಲಿಯನ್ನು ಸೋಲಿಸಿ ಬದುಕಬೇಕೆಂಬ ಆಶೆಯಿದ್ದರೆ ಇರುವುದು ಇದೊಂದೇ ದಾರಿ. ನನಗೀಗ ನಿದ್ರೆ ಬರುತ್ತಿದೆ. ಹೋಗು ಇಲ್ಲಿಂದ' ಎಂದು ಹೇಳಿ ಮುಸುಕು ಹಾಕಿ ಮಲಗಿತು.

ಹಂದಿಗೆ ಬೇರೆ ದಾರಿಯೇ ಇರಲಿಲ್ಲ. ದುರ್ಗಂಧ ಬರುತ್ತಿದ್ದ ಕೆಸರಿನಲ್ಲಿ ಹೊರಳಾಡಿ ಮೈಗೆ ದಪ್ಪವಾಗಿ ಮೆತ್ತಿಕೊಂಡಿತು. ಬೆಳಗಾಗುತ್ತಲೇ ಕೊಳದ ಬಳಿಗೆ ಹೋಯಿತು. ಕಾದಾಟಕ್ಕೆಂದು ಉಗುರು ಮಸೆಯುತ್ತ ನಿಂತಿದ್ದ ಹುಲಿಯೊಂದಿಗೆ, 'ಶಕ್ತಿಯಿದ್ದರೆ ಬಾ ನನ್ನನ್ನು ಸೀಳಿಹಾಕು. ನಿನ್ನಂತಹ ಕ್ಷುಲ್ಲಕನೊಂದಿಗೆ ನಾನು ಯುದ್ಧ ಮಾಡುವುದಿಲ್ಲ. ಸುಮ್ಮನೆ ನಿಲ್ಲುತ್ತೇನೆ. ಶಕ್ತಿ ಪ್ರದರ್ಶನ ನೀನೊಬ್ಬನೇ ಮಾಡು' ಎಂದು ಕರೆಯಿತು. ಹುಲಿ ಕೋಪದಿಂದ ಬಾಯ್ತೆರೆದು ಓಡಿ ಬಂದು ಹಂದಿಯ ಗಂಟಲಿಗೆ ಬಾಯಿ ಹಾಕಿತು. ಆಗ ಕೆಟ್ಟ ವಾಸನೆಯ ಕೆಸರು ಬಾಯೊಳಗೆ ತುಂಬಿ ವಾಂತಿ ಬರುವಂತಾಯಿತು. ಆದರೂ ಬಾಯಲ್ಲಿದ್ದುದನ್ನು ಉಗುಳಿ ಮತ್ತೆ ಬಂದು ಹಂದಿಯ ಹೊಟ್ಟೆಯನ್ನು ಸೀಳಲು ಪ್ರಯತ್ನಿಸಿತು. ಏನು ಮಾಡಿದರೂ ಹಂದಿಯ ಮೈಯಲ್ಲಿದ್ದ ಕೆಸರಿನಿಂದಾಗಿ ಅದನ್ನು ಕೊಲ್ಲಲು ಹುಲಿಯಿಂದಾಗಲಿಲ್ಲ. ಸೋತು ತಲೆ ತಗ್ಗಿಸಿ ಹೊರಟುಹೋಯಿತು. ಹಂದಿ ಸಾವಿನಿಂದ ಪಾರಾದರೂ ಹುಲಿಯ ಭಯ ತೊಲಗಲಿಲ್ಲ. ಹೀಗಾಗಿ ದಿನಾಲೂ ಕೆಸರಿನಲ್ಲಿ ಹೊರಳಿ ಮೈಗೆ ಮೆತ್ತಿಕೊಳ್ಳದೆ ಹೊರಗೆ ಹೋಗದ ಅಭ್ಯಾಸವನ್ನು ಉಳಿಸಿಕೊಂಡಿತು.

(ಮೇಘಾಲಯದ ಕತೆ)